ವಿಷಯ : ಅರಸೀಕೆರೆ ತಾಲ್ಲೂಕಿನಲ್ಲಿ ತೆಂಗಿನ ಮರಗಳಿಗೆ ಬಿದ್ದಿರುವ ಕೀಟ ಹಾಗೂ ರೋಗದ ಬಗ್ಗೆ.

ಪ್ರ. ಸಂಖ್ಯೆ 592 (1725) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).— ಮಾನ್ಯ ಪಶು ಸಂಗೋಪನಾ ಪಶುವೈದ್ಯ ಸೇವೆಗಳು ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಅರಸೀಕೆರೆ ತಾಲ್ಲೂಕಿನಲ್ಲಿ ತೆಂಗಿನ ಬೆಳೆಗೆ ಕೀಟಗಳಿಂದ ಮತ್ತು ರೋಗಗಳಿಂದ ಹಾನಿಯುಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಹಾನಿಯುಂಟಾಗಿರುವ ಬೆಳೆಗೆ ಸರ್ಕಾರದವರು ಒದಗಿಸುವ ಪರಿಹಾರವೇನು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶು ಸಂಗೋಪನೆ, ಪಶುವೈದ್ಯ ಸೇವೆ ಮತ್ತು ತೋಟಗಾರಿಕೆ ಸಚಿವರು).—

(ಅ) ಹೌದು.

(ಆ) ಸ್ಥಳ ಸಮೀಕ್ಷೆ ನಡೆಸಿದಾಗ, ಅರಸೀಕೆರೆ ತಾಲ್ಲೂಕಿನಲ್ಲಿ ಕಪ್ಪು ತಲೆ ಕೀಟದ ಬಾಧೆಯು ಪ್ರಾಥಮಿಕ ಹಂತದಲ್ಲಿದೆಯೆಂದು ಕಂಡುಬಂದಿದ್ದು, ಈ ಕೆಳಗಿನ ಪರಿಹಾರ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಿದೆ.

1. ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ಪರತಂತ್ರ ಜೀವಿ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಈವರೆಗೆ 1,01,860 ಪರತಂತ್ರ ಜೀವಿಗಳನ್ನು ಅದರಿಂದ ಬಾಧೆಗೊಳಗಾದ ತೋಟಗಳಿಗೆ ಬಿಡಲಾಗಿದೆ.

2. ಎಲ್ಲೆಲ್ಲಿ ಕಪ್ಪುತಲೆ ಹುಳದ ಉಪಟಳ ಜಾಸ್ತಿಯಿದೆಯೋ ಅಂತಹ ತೋಟಗಳಲ್ಲಿ 'ಮಾನೋಕ್ರೋಟೋಫಾಸ್' ಔಷಧಿ ಸಿಂಪರಣೆ ಹಾಗೂ ಚುಚ್ಚುಮದ್ದು ನೀಡುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಅದಕ್ಕೆ ಬೇಕಾದಂಥ ಔಷಧಿಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉಚಿತವಾಗಿಯೂ, ದೊಡ್ಡ ರೈತರಿಗೆ ಶೇಕಡ 50ರ ರಿಯಾಯಿತಿ ದರದಲ್ಲಿಯೂ ಒದಗಿಸಲಾಗುತ್ತದೆ

3. ಕೆಲವೆಡೆಗಳಲ್ಲಿ ಕಂಡುಬಂದ ಕಾಂಡದಲ್ಲಿ ರಸ ಸೋರುವಿಕೆ ತಡೆಗಟ್ಟಲು ಅಂತಹ ಭಾಗಗಳನ್ನು ಶುದ್ಧಪಡಿಸಿ, ಬೋರ್ಡಾಕ್ಸ್ ಪೇಸ್ಟನ್ನು ಹಚ್ಚಿ ಅದರ ಮೇಲೆ 'ಕೋಲ್-ಟಾರ್'ನ್ನು ಹಚ್ಚಲಾಗುತ್ತಿದೆ. ಇದಲ್ಲದೆ, ಬಸಿ ಕಾಲುವೆಗಳನ್ನು ಸಹ ತೆಗೆಯಲು ಶಿಫಾರಸು ಮಾಡಲಾಗುತ್ತಿದೆ.

4. ಅಣಬೆ ರೋಗ ಕಂಡುಬಂದ ಇನ್ನಿತರ ಸ್ಥಳಗಳಲ್ಲಿ ಮರಗಳನ್ನು ಬೇರ್ಪಡಿಸಲು ಅವುಗಳ ಸುತ್ತಲೂ ಆಳವಾದ ಚರಂಡಿಗಳನ್ನು ತೆಗೆದು ರಂಜಕದ ಪುಡಿಯನ್ನು ಹಾಕಲು ತಿಳಿಸಲಾಗುತ್ತಿದೆ

ವಿಷಯ : ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆ.

ಪ್ರ. ಸಂಖ್ಯೆ 593 (1600) ಡಾ. ನಾಗರೆಡ್ಡಿ ಲಚಮಾರೆಡ್ಡಿ (ಸೇಡಂ).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಕಳೆದ ಮೂರು ವರ್ಷಗಳಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಮಂಜೂರಾಗಿರುವ ಗ್ರಾಮಾಂತರ ನೀರು ಸರಬರಾಜು ಯೋಜನೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸಬೇಕಾಗಿ ವಿನಂತಿ).

(ಆ) ಮೇಲ್ಕಂಡ ಯೋಜನೆಗಳ ಪೈಕಿ ಪೂರ್ತಿಯಾಗಿರುವ ಯೋಜನೆಗಳೆಷ್ಟು ಮತ್ತು ಹಾಗೆ ಪೂರ್ತಿಯಾಗಿರುವ ಯೋಜನೆಗಳ ಪೈಕಿ ನೀರು ಸರಬರಾಜು ಮಾಡುತ್ತಿರುವ ಯೋಜನೆಗಳೆಷ್ಟು ; ಮತ್ತು ಸರಬರಾಜು ಮಾಡುತ್ತಿಲ್ಲದಿರುವ ಯೋಜನೆಗಳೆಷ್ಟು (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು).

(ಇ) ಇನ್ನುಳಿದ ಯೋಜನೆಗಳನ್ನು ಪೂರ್ತಿಗೊಳಿಸುವಲ್ಲಿ ವಿಳಂಬವಾಗಲು ಕಾರಣವೇನು ;

(ಈ) 1984-85ನೇ ಸಾಲಿನಲ್ಲಿ ಹೊಸ ಯೋಜನೆಗಳನ್ನೇನಾದರೂ ಮಂಜೂರು ಮಾಡಲಾಗುವುದೇ ;

(ಉ) ಹಾಗಿದ್ದಲ್ಲಿ ಅವು ಯಾವುವು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ಒಟ್ಟು 86 ಯೋಜನೆಗಳು.

ತಾಲ್ಲೂಕುವಾರು ವಿವರಗಳು ಕೆಳಗಿನಂತಿವೆ :

1.	ಅಫಜಲ್‌ಪುರ	10
2.	ಆಳಂದ	9
3.	ಚಿಂಚೋಳಿ	6
4.	ಚಿತ್ತಾಪುರ	8
5.	ಗುಲ್ಬರ್ಗಾ	10
6.	ಜೇವರ್ಗಿ	8
7.	ಸೇಡಂ	10
8.	ಶಹಾಪುರ	9
9.	ಸುರಪುರ	8
10.	ಯಾದಗೀರ್	8
	ಒಟ್ಟು	86

(ಆ) ತಾಲ್ಲೂಕುವಾರು ವಿವರಗಳು ಕೆಳಗಿನಂತಿವೆ :

		ಕಾರ್ಯಚರಣೆಗೊಳಿಸಿದ ಯೋಜನೆಗಳು	ಕೆಲಸಮಾಡುತ್ತಿರುವ ಯೋಜನೆಗಳು	ಕಾರ್ಯಚರಣೆಯಲ್ಲಿರದ ಯೋಜನೆಗಳು
1.	ಅಫ್ಜಲ್‌ಪುರ	3	3	—
2.	ಆಳಂದ	4	4	—
3.	ಚಿಂಚೋಳಿ	–	–	—
4.	ಚಿತ್ತಾಪುರ	3	3	—
5.	ಗುಲ್ಬರ್ಗಾ	5	4	1
6.	ಜೇವರ್ಗಿ	2	2	—
7.	ಸೇಡಂ	1	1	—
8.	ಶಹಾಪುರ	3	3	—
9.	ಸುರಪುರ	1	1	—
10.	ಯಾದಗೀರ್	2	2	—
	ಒಟ್ಟು	24	23	1

(ಇ) ವಿಳಂಬವಾಗಿರುವುದಕ್ಕೆ ಕಾರಣಗಳು ಕೆಳಕಂಡಂತಿವೆ.

1. ಜಲಮೂಲವನ್ನು ಸ್ಥಾಪಿಸುವುದರಲ್ಲಿ ವಿಳಂಬ.
2. ಗ್ರಾಮಗಳು ಅತಿ ಒಳಭಾಗದಲ್ಲಿರುವುದು.
3. ಗ್ರಾಮಗಳಿಗೆ ಸರ್ವ ಋತುವಿನಲ್ಲೆಲ್ಲೂ ಹೋಗುವ ರಸ್ತೆಯ ವ್ಯವಸ್ಥೆ ಇಲ್ಲ. ಆದಕಾರಣ ಮಳೆಗಾಲದಲ್ಲಿ ಕಾರ್ಯನಿರ್ವಹಿಸಲು ತೊಂದರೆಯುಂಟಾಗುತ್ತದೆ.
4. ಕೆಲಸ ಕೈಗೊಳ್ಳಲು ಅನುಭವಿ ಮತ್ತು ಯೋಗ್ಯತೆ ಹೊಂದಿರುವ ಗುತ್ತಿಗೆದಾರರು ಸಿಗದಿರುವ ಬಗ್ಗೆ.
5. ಕೆಲವೊಂದು ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಇಲ್ಲದಿರುವುದು ಇತ್ಯಾದಿ.

(ಈ) ಹೌದು – ಈ ಯೋಜನೆಗಳನ್ನು 1984–85ನೇ ಸಾಲಿನ ಮುಂಗಡ ಅಂದಾಜು ಪಟ್ಟಿಯಲ್ಲಿ ಸೇರಿಸಲಾಗಿದೆ.

1.	ಮಹಂತಪುರ ಕ್ಷೇತ್ರ	ಅಫಜಲ್‌ಪುರ ತಾಲ್ಲೂಕು
2.	ಬೆಳಂಬಗಿ	ಆಳಂದ ,,
3.	ಸರಸಂಬಾ	ಆಳಂದ ,,
4.	ನಾಗಾಯಿದ್ದ್ಲಾಯಿ	ಚಿಂಚೋಳಿ ,,

5. ಸಾಲಹಾರ್ (ಸುಧಾರಣೆ)		
6. ಇಷನಿ ಮತ್ತು ಬಿಳಗುಂಪಾ	ಚಿತ್ತಾಪುರ	,,
7. ಕವುರವಾಗಿ ಮತ್ತು	ಸುಲಹಳ್ಳಿ	
8. ಹರಸೂರು	ಗುಲ್ಬರ್ಗಾ	,,
9. ಅರಲಗುಂಡಗಿ	ಜೇವರ್ಗಿ	,,
10. ದುಗನೂರ್	ಸೇಡಂ	,,
11. ದರ್ಶನಾಪುರ	ಶಹಾಪುರ	,,
12. ವಿವೂರ	ಸುರಪುರ	,,
13. ಪುಟಪಾಕ್	ಯಾದಗೀರ್	,,
14. ಮುದ್ನಾಳ	ಯಾದಗೀರ್	,,

ವಿಷಯ : ಧಾರವಾಡ ಜಿಲ್ಲೆಯಲ್ಲಿ ತುಂತುರು ನೀರಾವರಿ ಯೋಜನೆ.

ಪ್ರ. ಸಂಖ್ಯೆ 594 (1190) ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಳ).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಧಾರವಾಡ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಆಶ್ರಯದಲ್ಲಿ ಸ್ಥಾಪಿಸಲಾಗಿರುವ ತುಂತುರು ನೀರಾವರಿ ಯೋಜನೆಗಳೆಷ್ಟು; ಮತ್ತು ಅವುಗಳಲ್ಲಿ ಎಷ್ಟು ಯೋಜನೆಗಳು ನಿಷ್ಕ್ರಿಯವಾಗಿದೆ;

(ಆ) ಎಕರೆ ಒಂದಕ್ಕೆ ಸದರಿ ತುಂತುರು ನೀರಾವರಿ ಯೋಜನೆಗಾಗಿ ತಗಲಿದ ಸರಾಸರಿ ವೆಚ್ಚವೆಷ್ಟು ಮತ್ತು ಇತರ ನೀರಾವರಿ ಪದ್ಧತಿಗಳಲ್ಲಿ ಪ್ರತಿ ಎಕರೆಗೆ ತಗುಲುವ ವೆಚ್ಚವೆಷ್ಟು ;

(ಇ) ಈ ತುಂತುರು ಯೋಜನೆಗಳನ್ನು ಕೈಗೊಳ್ಳುವಾಗ ನಡೆದಿರುವ ಅನೇಕ ಅಕ್ರಮಗಳು ಮತ್ತು ಸರಬರಾಜುದಾರ ಸಂಸ್ಥೆಗಳ ಜೊತೆ ಅಧಿಕಾರಿಗಳು ಶಾಮೀಲಾಗಿ ನಡೆದಿರುವ ಭ್ರಷ್ಟಾಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—

(ಅ) ಧಾರವಾಡ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಆಶ್ರಯದಲ್ಲಿ 51 ತುಂತುರು ನೀರಾವರಿ ಯೋಜನೆಗಳು ಸ್ಥಾಪಿಸಲಾಗಿದ್ದು ಅವುಗಳಲ್ಲಿ 11 ಯೋಜನೆಗಳು ನಿಷ್ಕ್ರಿಯವಾಗಿದೆ.

(ಆ) ಎಕರೆ ಒಂದಕ್ಕೆ ಸದರಿ ತುಂತುರು ನೀರಾವರಿ ಯೋಜನೆಗೆ 3000 ರೂಪಾಯಿಗಳು ಸರಾಸರಿ ವೆಚ್ಚವಾಗಿರುತ್ತದೆ. ಹಾಗೂ ಇತರೇ ನೀರಾವರಿ ಪದ್ಧತಿಗಳಲ್ಲಿ ಪ್ರತಿ ಎಕರೆಗೆ ತಗಲುವೆ ವೆಚ್ಚವು 3750 ರೂಪಾಯಿಗಳಾಗಿರುವುದು.

(ಇ) ಈ ತುಂತುರು ಯೋಜನೆಗಳನ್ನು ಕೈಗೊಳ್ಳುವಾಗ ನಡೆದಿರುವ ಅಕ್ರಮಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

(ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಮೂಡಿಗೆರೆ ಹೆಣ್ಣುಮಕ್ಕಳ ಪ್ರೌಢಶಾಲೆ ಶಿಥಿಲವಾಗಿರುವುದು.

ಪ್ರ. ಸಂಖ್ಯೆ 595 (1731) ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಮೂಡಿಗೆರೆ ಹೆಣ್ಣುಮಕ್ಕಳ ಪ್ರೌಢಶಾಲಾ ಕಟ್ಟಡವು ಶಿಥಿಲವಾಗಿದ್ದು ಅಲ್ಲಿ ಶಾಲೆ ನಡೆಸುವುದೇ ಅಪಾಯಕರವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ಕೈಗೊಂಡಿರವ ಕ್ರಮವೇನು ;

(ಇ) ಇದರ ದುರಸ್ತಿ ಸಾಧ್ಯವಾಗದಿದ್ದಲ್ಲಿ ಸರ್ಕಾರದವರು ಬೇರೆ ಒಂದು ಕಟ್ಟಡವನ್ನು ನಿರ್ಮಿಸಿ ಕೊಡುವರೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—

(ಅ) ಬಂದಿದೆ.

(ಆ) ತುರ್ತು ದುರಸ್ತಿಯಾಗಬೇಕಾಗಿರುವ ಪ್ರೌಢಶಾಲಾ ಕಟ್ಟಡಗಳ ದುರಸ್ತಿಯನ್ನು ಕೂಡಲೆ ಕೈಗೊಳ್ಳುವಂತೆ ಮುಖ್ಯ ಅಭಿಯಂತರರು (ಕಟ್ಟಡ ಮತ್ತು ಸಂಪರ್ಕ), ಬೆಂಗಳೂರು ಇವರಿಗೆ ಪ್ರಸ್ತಾವನೆಗಳನ್ನು ಕಳುಹಿಸಲಾಗಿದೆ.

(ಇ) ಇದನ್ನು ಪರಿಶೀಲಿಸಲಾಗುವುದು.